ಸಂಖ್ಯೆ:ಎ11/ಭೂಮಿ/ಸಿಆರ್-141 /2017-18

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
(ಪ್ರಾದೇಶಿಕ) ಬೆಂಗಳೂರು
ದಿನಾಂಕ: 02.11.2017

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು ಗ್ರಾಮಾಂತರ ವಿಭಾಗ
ಬೆಂಗಳೂರು

**ಅತಿ ಜರೂರು**

**ವಿಷಯ:** Diversion of 0.25 ha Forest land in Nallala village Sy No. 1 of Nallala state Forest for Construction of Surge tank along pipe line to be laid under KC Valley project in favour of Executive Engineer, Water Resource Department ( Minor lrrigation), Kolar to fill 126 tanks in Kolar and Chikkaballapura Districts- reg

**ಉಲ್ಲೇಖ:** ನಿಮ್ಮ ಕಛೇರಿಯ ಪತ್ರ ಸಂಖ್ಯೆ: ಎ4/ಭೂಮಿ/ಜಿಎಲ್-1676/2013-14 ದಿನಾಂಕ: 27/30.10.2017

*-*-*-*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಹೊಸಕೋಟೆ ವಲಯದ ನಲ್ಲಾಳ ರಾಜ್ಯ ಅರಣ್ಯ ಪ್ರದೇಶಕ್ಕೆ ಸೇರಿದ ನಲ್ಲಾಳ ಗ್ರಾಮ ಸರ್ವೆ ನಂ. 1ರಲ್ಲಿ 0.25 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಸಣ್ಣ ನೀರಾವರಿ ಇಲಾಖೆಗೆ ಸರ್ಜ್ ಟ್ಯಾಂಕ್ ನಿರ್ಮಾಣ ಮಾಡುವ ಕುರಿತು ಉಲ್ಲೇಖಿತ ಪತ್ರದಲ್ಲಿ ನೀವು ಸಲ್ಲಿಸಿರುವ ಪ್ರಸ್ತಾವನೆ ಹಾಗೂ ಅದರ ಅಡಕಗಳನ್ನು ಪರಿಶೀಲಿಸಲಾಗಿದ್ದು, Part –II ನಲ್ಲಿ ಪರಿಹಾರಾತ್ಮಕ ನೆಡುತೋಪಿಗೆ ಸಂಬಂಧಿಸಿದಂತೆ ಮಾಹಿತಿಯು ಅಗತ್ಯವಿರುವುದಿಲ್ಲವೆಂದು ಸಲ್ಲಿಸಿರುತ್ತೀರಿ. ಆದರೆ ಅರಣ್ಯ ಸಂರಕ್ಷಣೆ ಕಾಯ್ದೆ 1980 ರ ಅಧ್ಯಾಯ-3 ರ 3.2 (VIII) (b) ರ ಪ್ರಕಾರ ಮಾರ್ಗಪಲ್ಲಟಗೊಳಿಸುವ ಪ್ರದೇಶವು ಒಂದು ಹೆಕ್ಟೇರ್‌ಗಿಂತ ಕಡಿಮೆ ಇದ್ದರೂ ಸಹ ಸದರಿ ಪ್ರದೇಶದಲ್ಲಿ ಕಟ್ಟಾವು ಮಾಡಲಾಗುವಂತಹ ಒಂದು ಮರದ ಬದಲಾಗಿ 10 ಸಸಿಗಳನ್ನು (18 X 10=180) ಬೆಳೆಸುವ ಸಂಬಂಧ 0.50 ಹೆಕ್ಟೇರ್ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಕ್ಷೀಣಿತ ಅರಣ್ಯ ಪ್ರದೇಶವನ್ನು ಗುರ್ತಿಸಿ ಈ ಕೆಳಕಂಡ ದಾಖಲಾತಿಗಳೊಂದಿಗೆ ಸಲ್ಲಿಸಲು ಸೂಚಿಸಿದೆ.

1. ಪರಿಹಾರಾತ್ಮಕ ನೆಡುತೋಪು ಬೆಳೆಸಲು ಗುರ್ತಿಸಿದ ಕ್ಷೀಣಿತ ಅರಣ್ಯ ಪ್ರದೇಶವನ್ನು ಟೊಪೋ ನಕಾಶೆ ಮತ್ತು ಗ್ರಾಮ ನಕಾಶೆಯಲ್ಲಿ ಬಣ್ಣದಿಂದ ಗುರ್ತಿಸಿ, ಜಿ.ಪಿ.ಎಸ್. ರೀಡಿಂಗ್ ನೊಂದಿಗೆ ಸಲ್ಲಿಸುವುದು.
2. ಪರಿಹಾರಾತ್ಮಕ ನೆಡುತೋಪು ಬೆಳೆಸುವ ಪ್ರದೇಶದ ಬಗ್ಗೆ ಯೋಗ್ಯತಾ ಪ್ರಮಾಣ ಪತ್ರ.
3. ಪರಿಹಾರಾತ್ಮಕ ನೆಡುತೋಪು ಬೆಳೆಸುವ ಕ್ಷೀಣಿತ ಅರಣ್ಯ ಪ್ರದೇಶದ ವಿವರವನ್ನು K.M.L file ನಲ್ಲಿ ಸಲ್ಲಿಸುವುದು.
4. ಪರಿಹಾರಾತ್ಮಕ ನೆಡುತೋಪು ಬೆಳೆಸುವ ಮತ್ತು ನಿರ್ವಹಣೆಯ ಬಗ್ಗೆ ( CA Scheme ) 10 ವರ್ಷಗಳಿಗೆ ಯೋಜನೆ ತಯಾರಿಸಿ ಸಲ್ಲಿಸುವುದು
5. ಸದರಿ ಎಲ್ಲಾ ದಾಖಲೆಗಳನ್ನು ಕ್ಷೇತ್ರಾಧಿಕಾರಿಗಳ ಸಹಿಯೊಂದಿಗೆ ಸಲ್ಲಿಸುವುದು.

ಈ ಮೇಲಿನ ಎಲ್ಲಾ ದಾಖಲಾತಿಗಳನ್ನು ವರದಿಯೊಂದಿಗೆ ತುರ್ತಾಗಿ ಸಲ್ಲಿಸುವಂತೆ ಸೂಚಿಸುತ್ತಾ, ಈಗಾಗಲೇ ನೀವು ಸಲ್ಲಿಸಿರುವ ಪ್ರಸ್ತಾವನೆಯ 6 ಪ್ರತಿಗಳಲ್ಲಿ 5 ಪ್ರತಿಗಳನ್ನು ಈ ಪತ್ರಕ್ಕೆ ಲಗತ್ತಿಸಿ ಹಿಂದಿರುಗಿಸಿದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಪ್ರಾದೇಶಿಕ) ಬೆಂಗಳೂರು

Bhavya A11/LA | 451